MVC No.178/2020 PW-1

**ದಿನಾಂಕ 20.11.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಎಸ್ ಆರ್ ಯು ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನಾನು 4 ಹಸುಗಳನ್ನು ಸಾಕುತ್ತೇನೆ. ಹಾಲನ್ನು ಡೈರಿಗೆ ಹಾಕುತ್ತೇನೆ. ನಾನು ಹಸು ಸಾಕಾಣಿಕೆಯನ್ನು 20 ವರ್ಷಗಳಿಂದ ಮಾಡುತ್ತಿದ್ದೇನೆ. ನಮ್ಮ ಊರಿನಲ್ಲಿ ಹಾಲಿನ ಡೈರಿ ಇದೆ. ಡೈರಿಯ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಬೆಂಗಳೂರು ಮೈಸೂರು ಮುಖ್ಯ ರಸ್ತೆ ವಾಹನ ದಟ್ಟಣೆ ಇರುತ್ತದೆ ಎಂದರೆ ನಿಜ. ನನಗೆ ಹೆಚ್ ಎಫ್ ಹಸುಗಳು ಇಲ್ಲ. ಹಸುಗಳನ್ನು ಹೊರಗಡೆಬಿಡುವುದಿಲ್ಲವೆಂದರೆ ಸಾಕ್ಷಿಯು ನಾವು ಬಿಡುತ್ತೇವೆಂದು ನುಡಿಯುತ್ತಾರೆ. ಘಟನಾ ದಿನ ನಾನು ಹಸುಗಳನ್ನು ಮೇಯಿಸಲು ಹೋಗುತ್ತಿದ್ದೆ. ನಮ್ಮ ಮನೆಯಿಂದ 1ಕಿ. ಮೀ ಹೊಡೆದುಕೊಂಡು ಹೋಗುತ್ತಿದ್ದೆ. ಬಿ ಎಂ ರಸ್ತೆ ಬಿಟ್ಟು ಹಸುಗಳನ್ನು ಹೊಡೆದುಕೊಂಡು ಹೋಗಲು ಬೇರೆ ರಸ್ತೆ ಇದೆ. ವಾಹನಗಳು ಅಡ್ಡ ಬಂದಾಗ ವಾಹನಗಳು ಹಾರನ್ ಮಾಡುತ್ತವೆ ಎಂದರೆ ನಿಜ. ಆಗ ನಮ್ಮ ಹಸುಗಳು ಅಡ್ಡಾ ದಿಡ್ಡಿ ಓಡುತ್ತವೆ ಎಂದರೆ ನಿಜ. ಘಟನಾ ದಿನ ಮೈಸೂರಿಗೆ ಹೋಗುವ ರಸ್ತೆ ಎಡಭಾಗದಲ್ಲಿ ಹೋಗುತ್ತಿದ್ದೆನು. ಅಲ್ಲಿ ಚಕ್ಕರೆ ಗೇಟ್ ಇದೆ ಎಂದರೆ ನಿಜ. ಅಲ್ಲಿ ತಿರುವು ಇದೆ ಎಂದರೆ ನಿಜ. ಅದರ ಹಿಂದೆ ರಸ್ತೆ ತಡೆ ಇದೆ ಎಂದರೆ ಸುಳ್ಳು. ರಸ್ತೆ ತಡೆ ಇರುವುದರಿಂದ ವಾಹನಗಳು ನಿಧಾನವಾಗಿ ಓಡಾಡುತ್ತದೆ ಎಂದರೆ ಸುಳ್ಳು. ಬಸ್ಸು ಚಾಲಕನ ತಪ್ಪಿ ನಿಂದ ಅಪಘಾತವಾಗಿಲ್ಲ ಎಂದರೆ ಸುಳ್ಳು. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸುಳ್ಳು. ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.